KAMS510123252022

ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ

ನ್ಯಾಯಾಲಯ, ನಂಜನಗೂಡು.

ಉಪಸ್ಥಿತರುಃ ಶ್ರೀ. ಸತೀಶ ಕೆ.ಜಿ

ಬಿ.ಎ., ಎಲ್‌ಎಲ್ ಬಿ.,

ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,

ನಂಜನಗೂಡು.

ದಿನಾಂಕಃ 2 ನೇ ಮೇ, 2026

ಅಪರಾಧಿಕ ಮೊಕದ್ದಮೆ (CRIMINAL CALENDAR CASE)

ಸಂಖ್ಯೆ 8831/2022

ಫಿರ್ಯಾದುದಾರರುಃ ಕರ್ನಾಟಕ ಸರ್ಕಾರದ ಪರವಾಗಿ
ಗ್ರಾಮಾಂತರ ಪೊಲೀಸ್ ಠಾಣೆ, ನಂಜನಗೂಡು

(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

// ವಿರುದ್ಧ //

ಆರೋಪಿಗಳುಃ

1) ಶ್ರೀಧರ ಬಿನ್ ಮೃತ ಮಾದಪ್ಪ,
ವಯಸ್ಸು ಸುಮಾರು 85 ವರ್ಷ,

2) ಶ್ರೀಮತಿ. ನಾಗಮ್ಮ ಕೋಂ ಮಂಜುನಾಥ,
ವಯಸ್ಸು ಸುಮಾರು 33 ವರ್ಷ,

3) ಶ್ರೀಮತಿ. ಶೋಭ ಕೋಂ ಕುಮಾರ,
ವಯಸ್ಸು ಸುಮಾರು 40 ವರ್ಷ,

4) ಶ್ರೀಮತಿ. ಮಂಗಳಮ್ಮ ಕೋಂ ನಾಗರಾಜು,
ವಯಸ್ಸು ಸುಮಾರು 50 ವರ್ಷ,

(ಪ್ರತಿನಿಧಿಸುವವರು ಶ್ರೀ.ಬಿ.. ಶ್ರೀಕಂಠಸ್ವಾಮಿ, ವಕೀಲರು)

1)	ಆರೋಪ ಪ್ರಾರಂಭಿಕ ದಿನಾಂಕ	:	29.03.2022
2)	ಆರೋಪ ವರದಿ ಮಾಡಿದ ದಿನಾಂಕ	:	30.03.2022
3)	ಆರೋಪಿಗಳನ್ನು ಬಂಧಿಸಿದ ದಿನಾಂಕ	:	- - - -
4)	ಆರೋಪಿಗಳು ಜಾಮೀನು ಪಡೆದ ದಿನಾಂಕ	:	22.12.2022
5)	ಆರೋಪಿಗಳು ಬಂಧನದಲ್ಲಿದ್ದ ಅವಧಿ	:	- - - -
6)	ಫಿರ್ಯಾದುದಾರರ ಹೆಸರು	:	ಶ್ರೀ. ಮಹದೇವು
7)	ಸಾಕ್ಷ್ಯ ವಿಚಾರಣಾ ಪ್ರಾರಂಭ ದಿನಾಂಕ	:	04.04.2026
8)	ವಿಚಾರಣೆ ಮುಕ್ತಾಯ ದಿನಾಂಕ	:	04.04.2026
9)	ಆರೋಪಗಳ ಸ್ವರೂಪ	:	ಭಾರತೀಯ ದಂಡ ಸಂಹಿತೆಯ ಕಲಂ-504, 341, 323, 324 ಮತ್ತು 506 ಸಹವಾಚಕ 34
10)	ನ್ಯಾಯಾಧೀಶರ ತೀರ್ಮಾನ	:	ಆರೋಪಿಗಳನ್ನು ನಿರ್ದೋಷಿಗಳೆಂದು ತೀರ್ಮಾನಿಸಲಾಗಿದೆ.

(ಸತೀಶ. ಕೆ.ಜಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು.

ತೀರ್ಪು

ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ-504, 341, 323, 324 ಮತ್ತು 506 ಸಹವಾಚಕ 34 ರ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾಪಟ್ಟಿ ಸಲ್ಲಿಸಿರುತ್ತಾರೆ.

2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-

ದಿನಾಂಕ 29.03.2022 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ದೇವಿರಮ್ಮನಹಳ್ಳಿ ಗೇಟ್

ಬಳಿ ಚಾಸಾ-1-ಶ್ರೀ.ಮಹದೇವುರವರು ತಮ್ಮ ಟೀ ಅಂಗಡಿಯ ಬಳಿ ಟೀ ಕುಡಿಯುತ್ತ ನಿಂತಿದ್ದಾಗ, ಆರೋಪಿಗಳು ಅಂಗಡಿ ಮಳಿಗೆಯ ವಿಚಾರದಲ್ಲಿ ಸಮಾನ ಉದ್ದೇಶದಿಂದ ಚಾಸಾ-1 ರವರ ಜೊತೆ ಜಗಳ ತೆಗೆದು ಚಾಸಾ-1 ರವರನ್ನು ಉದ್ದೇಶಿಸಿ "ಲೋಫರ್ ನನ್ನ ಮಗನೆ" ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ಆರೋಪಿಗಳು ಚಾಸಾ-1 ರವರನ್ನು ಹಿಡಿದುಕೊಂಡು ಅಕ್ರಮವಾಗಿ ಪ್ರತಿಬಂಧಿಸಿದ್ದು, 2 ನೇ ಆರೋಪಿ ಹಲ್ಲಿನಿಂದ ಚಾಸಾ-1 ರವರ ಎಡಮುಂಗೈಗೆ ಕಚ್ಚಿದ್ದು, 3 ನೇ ಆರೋಪಿ ಕೈಯಿಂದ ಚಾಸಾ-1 ರವರ ಮೈ-ಕೈಗೆ, 1 ನೇ ಆರೋಪಿ ಮಾರಕಾಯುಧವಾದ ದೊಣ್ಣೆಯಿಂದ ಚಾಸಾ-1 ರವರ ಮೈ-ಕೈಗೆ ಸ್ವ-ಇಚ್ಛೆಯಿಂದ ಹಲ್ಲೆ ಮಾಡಿ ನೋವುಂಟು ಮಾಡಿದ್ದಲ್ಲದೆ, ಆರೋಪಿಗಳೆಲ್ಲರು ಚಾಸಾ-1 ರವರನ್ನು ಉದ್ದೇಶಿಸಿ "ನೀನು ಬಚಾವಾದೆ, ಇಲ್ಲದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇವೆ" ಎಂದು ಜೀವಬೆದರಿಕೆ ಹಾಕಿರುತ್ತಾರೆಂದು ಆಪಾದಿಸಲಾಗಿದೆ. ನಂತರ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳು ತನಿಖೆ ನಡೆಸಿ, ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ-504, 341, 323, 324 ಮತ್ತು 506 ಸಹವಾಚಕ 34 ರ ದಂಡನೀಯವಾದ ಅಪರಾಧಗಳಿಗಾಗಿ ದೋಷಾರೋಪಣಾಪಟ್ಟಿ ಸಲ್ಲಿಸಿರುತ್ತಾರೆ.

3. ತನಿಖಾಧಿಕಾರಿಗಳು ದೋಷಾರೋಪಣಾಪಟ್ಟಿ ಸಲ್ಲಿಸಿದ ನಂತರ, ಭಾರತೀಯ ದಂಡ ಸಂಹಿತೆಯ ಕಲಂ-504, 341, 323, 324 ಮತ್ತು 506 ರ ಶಿಕ್ಷಾರ್ಹ ಅಪರಾಧಗಳಿಗೆ ಸಂಬಂಧಿಸಿದಂತೆ ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 190(1)(ಬಿ) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಸಂಜ್ಞೆ ತೆಗೆದುಕೊಳ್ಳಲಾಯಿತು.

4. ಆರೋಪಿಗಳು ಜಾಮೀನಿನ ಮೇಲಿರುತ್ತಾರೆ. ಈ ನ್ಯಾಯಾಲಯವು

ಆರೋಪಿಗಳಿಗೆ ದೋಷಾರೋಪಣಾ ಪತ್ರದ ನಕಲುಗಳನ್ನು ನೀಡಿ ಅವರ ವಿರುದ್ಧದ ಅಪರಾಧಕ್ಕಾಗಿ ದೋಷಾರೋಪಣೆಯನ್ನು ರಚಿಸಿ, ಓದಿ ವಿವರಿಸಲಾಗಿ, ಆರೋಪಿಗಳು ಒಪ್ಪಿಕೊಳ್ಳದ ಪ್ರಯುಕ್ತ ಪ್ರಕರಣವನ್ನು ವಿಚಾರಣೆ ಮಾಡಬೇಕೆಂದು ತಿಳಿಸಿದ ಕಾರಣ ಪ್ರಕರಣವನ್ನು ಸಾಕ್ಷಿದಾರರಿಗೆ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಕಳುಹಿಸಲಾಯಿತು.

5. ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸಲು ಚಾಸಾ-1-ಶ್ರೀ.ಮಹದೇವುರವರನ್ನು ಫ್ರಾಸಾ-1 ಎಂದು ವಿಚಾರಣೆ ಮಾಡಿ, ನಿಶಾನೆ ಪಿ-1 ರಿಂದ 3 ರಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಆರೋಪಿಗಳ ವಿರುದ್ಧ ಆರೋಪವನ್ನು ಸೂಚಿಸುವಂತಹ ಯಾವುದೇ ಸಾಕ್ಷ್ಯ (Incriminating Evidence) ಸಾಕ್ಷಿಗಳ ಹೇಳಿಕೆಯಲ್ಲಿ ಇಲ್ಲದಿರುವ ಕಾರಣ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ದಾಖಲು ಮಾಡಿಕೊಳ್ಳಬೇಕಾದ ಆರೋಪಿಗಳ ಹೇಳಿಕೆಗಳನ್ನು ಮನ್ನಾ ಮಾಡಲಾಯಿತು.

6. ಉಭಯ ಪಕ್ಷಗಾರರ ವಾದವನ್ನು ಕೇಳಲಾಯಿತು.

7. ವಾದ ವಿವಾದಗಳನ್ನು ಕೇಳಿ, ದಾಖಲೆಗಳನ್ನು ಪರಿಶೀಲಿಸಿದಾಗ ನ್ಯಾಯಾಲಯದ ಅವಗಾಹನೆಗೆ ಬರುವ ಅಂಶಗಳು ಈ ಕೆಳಕಂಡಂತೆ ಇರುತ್ತವೆಃ-

<u>ಅಂಶಗಳು</u>

1. ದಿನಾಂಕ 29.03.2022 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ದೇವಿರಮ್ಮನಹಳ್ಳಿ ಗೇಟ್ ಬಳಿ ಫ್ರಾಸಾ-1 ತಮ್ಮ ಟೀ ಅಂಗಡಿ ಬಳಿ ಟೀ ಕುಡಿಯುತ್ತ ನಿಂತಿದ್ದಾಗ, ಆರೋಪಿಗಳು ಸಮಾನ ಉದ್ದೇಶದಿಂದ ಫ್ರಾಸಾ-1 ರವರ ಜೊತೆ ಜಗಳ ತೆಗೆದು, "ಲೋಫರ್ ನನ್ನ ಮಗನೆ" ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು,

ಆ ಮೂಲಕ ಫ್ರಾಸಾ-1 ರವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಅವರು ಕುಪಿತರಾಗಿ ಶಾಂತಿಭಂಗವನ್ನುಂಟು ಮಾಡಲೆಂಬ ಅಥವಾ ಯಾವುದೇ ಅಪರಾಧವನ್ನು ಮಾಡಬೇಕೆಂಬ ಉದ್ದೇಶದಿಂದ ಅವರನ್ನು ಅವಮಾನಪಡಿಸಿದ್ದು,ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ-504 ಸಹವಾಚಕ 34 ರಡಿಯಲ್ಲಿ ದಂಡ ನೀಯವಾದ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಫ್ರಾಸಾ-1 ರವರನ್ನು ಹಿಡಿದುಕೊಂಡು ಒಂದು ಎಲ್ಲೆಯಿಂದಾಚೆಗೆ ಮುಂದೆ ಹೋಗದಂತೆ ಅಕ್ರಮವಾಗಿ ಪ್ರತಿಬಂಧಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ-341 ಸಹವಾಚಕ 34 ರಡಿಯಲ್ಲಿ ದಂಡನೀಯವಾದ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾ ತೀವಾಗಿ ರುಜುವಾತುಪಡಿಸುತ್ತಾರೆಯೇ?

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಸಮಾನ ಉದ್ದೇಶದಿಂದ ಫ್ರಾಸಾ-1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 2ನೇ ಆರೋಪಿ ಹಲ್ಲಿನಿಂದ ಫ್ರಾಸಾ-1 ರವರ ಎಡಮುಂಗೈಗೆ ಕಚ್ಚಿದ್ದು, 3ನೇ ಆರೋಪಿ ಕೈಯಿಂದ ಫ್ರಾಸಾ-1 ರವರ ಮೈ-ಕೈಗೆ ಮತ್ತು 1ನೇ ಆರೋಪಿ ಮಾರಕಾಯುಧವಾದ ದೊಣ್ಣೆಯಿಂದ ಫ್ರಾಸಾ-1 ರವರ ಮೈ-ಕೈಗೆ ಸ್ವ-ಇಚ್ಛೆಯಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ-323 ಮತ್ತು 324 ಸಹವಾಚಕ 34 ರಡಿಯಲ್ಲಿ ದಂಡನೀಯವಾದ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳೆಲ್ಲರು ಸಮಾನ ಉದ್ದೇಶದಿಂದ ಫ್ರಾಸಾ-1 ರವರನ್ನು ಉದ್ದೇಶಿಸಿ "ನೀನು ಬಚಾವಾದೆ, ಇಲ್ಲದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇವೆ" ಎಂದು ಜೀವಬೆದರಿಕೆ ಹಾಕಿದ್ದು, ಆ ಮೂಲಕ ಫ್ರಾಸಾ-1 ರವರು ಹೆದರುವಂತೆ ಮಾಡಿ ಅವರು ಕಾನೂನು ಸಮ್ಮತವಾಗಿ ಮಾಡಬೇಕಾಗಿರುವ ಕೃತ್ಯವನ್ನು ಮಾಡದಂತೆ ಅಥವಾ ಕಾನೂನು ಸಮ್ಮತವಾಗಿ ಮಾಡಬಾರದ ಕೃತ್ಯವನ್ನು ಮಾಡುವಂತೆ ಅಪಾಯದ ಭೀತಿಯನ್ನು ಹುಟ್ಟಿಸಿ ಅಪರಾಧಿಕ ಭಯೋತ್ಪಾದನೆ ಯನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ-506 ಸಹವಾಚಕ 34 ರಡಿಯಲ್ಲಿ ದಂಡನೀಯವಾದ ಅಪರಾಧವೆಸಗಿದ್ದಾರೆಂದು ಅಭಿಯೋಜನೆ ಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

5. ಯಾವ ಆಜ್ಞೆ ಅಥವಾ ಶಿಕ್ಷೆ ?

8. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆಃ

ಅಂಶಃ 1 – **ನಕಾರಾತ್ಮಕವಾಗಿ**
ಅಂಶಃ 2 – **ನಕಾರಾತ್ಮಕವಾಗಿ**
ಅಂಶಃ 3 – **ನಕಾರಾತ್ಮಕವಾಗಿ**
ಅಂಶಃ 4 – **ನಕಾರಾತ್ಮಕವಾಗಿ**
ಅಂಶಃ 5 – ಅಂತಿಮ ಆದೇಶದ ಪ್ರಕಾರ.

ಕಾರಣಗಳು

9. **ಅಂಶ.1 ರಿಂದ 4**:- ಈ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತ, ಪೂರಕ ಹಾಗು ಪರಸ್ಪರ ಹೆಣೆಯಲ್ಪಟ್ಟಿರುತ್ತವೆ ಮತ್ತು ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚಿಸಿ ನಿರ್ಧರಿಸಬಹುದಾಗಿರುವುದರಿಂದ ಮತ್ತು ಪ್ರಕರಣದ ಸಂಗತಿ ಮತ್ತು ಸಾಕ್ಷ್ಯ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ಗಣನೆಗೆ ತೆಗೆದುಕೊಳ್ಳಲಾಗಿದೆ. (All these points are taken together for

discussion as they are interlinked and inter woven with each others.)

10. ಅಭಿಯೋಜನೆಯ ಪ್ರಕರಣವೇನು ಎಂಬುದನ್ನು ಈಗಾಗಲೇ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಆರೋಪಿಗಳು ಭಾರತೀಯ ದಂಡ ಸಂಹಿತೆಯ ಕಲಂ 504, 341, 323, 324 ಮತ್ತು 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತಾರೆಂದು ಸಾಬೀತುಪಡಿಸಲು ಅಭಿಯೋಜನೆಯು ಸಾದರಪಡಿಸಿರುವ ಸಾಕ್ಷ್ಯವನ್ನು ಶ್ಲಾಘಿಸುವ ಮೊದಲು, ಸದರಿ ಪುರಾವೆಗಳನ್ನು ಪ್ರಶಂಸಿಸುವ ಕಾನೂನನ್ನು ಪರಿಗಣಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಅಭಿಯೋಜನೆಯು ಭಾರತೀಯ ದಂಡ ಸಂಹಿತೆಯ ಕಲಂ 504, 341, 323, 324 ಮತ್ತು 506 ರಲ್ಲಿ ಹೇಳಿರುವ ಅವಶ್ಯಕ ಘಟಕಾಂಶಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗುತ್ತದೆ.

11. ಆರೋಪಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಪ್ರಾಸಾ-1 ರವರನ್ನು ಉದ್ದೇಶಿಸಿ "ಲೋಫರ್ ನನ್ನ ಮಗನೆ" ಎಂದು ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ-504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತಾರೆಂದು ಪರಿಗಣಿಸಬೇಕಾದರೆ ಭಾರತೀಯ ದಂಡ ಸಂಹಿತೆ ಕಲಂ-504 ರಲ್ಲಿ ಹೇಳಿರುವ ಈ ಕೆಳಕಂಡ ಅವಶ್ಯಕ ಘಟಕಾಂಶಗಳನ್ನು (Essential Ingredients) ರುಜುವಾತುಪಡಿಸಬೇಕು.

(1) ಆಪಾದಿತನು ಒಬ್ಬ ವ್ಯಕ್ತಿಯನ್ನು ಅವಮಾನಗೊಳಿಸಿದನು.

(2) ಅವನು ಹಾಗೆ ಉದ್ದೇಶಪೂರ್ವಕವಾಗಿ ಮಾಡಿದನು.

(3) ಹಾಗೆ ಮಾಡಿ ಆ ವ್ಯಕ್ತಿಯನ್ನು ಆಪಾದಿತನು ಉದ್ರೇಕಗೊಳಿಸಿದನು,

(4) ಅಂತಹ ಉದ್ರೇಕವು ಆ ವ್ಯಕ್ತಿಯು ಶಾಂತಿಭಂಗವನ್ನುಂಟು ಮಾಡುವಂತೆ ಮಾಡುವುದು ಅಥವಾ ಮಾಡುವ ಸಂಭವವಿದೆ ಮತ್ತು

(5) ಹಾಗಾಗಲಿ ಎಂದು ಉದ್ದೇಶಿಸಿದ್ದನು ಅಥವಾ ಹಾಗಾಗುತ್ತಿದೆ ಎಂದು ಆಪಾದಿತನು ತಿಳಿದಿದ್ದನು.

12. ಆರೋಪಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಫ್ರಾಸಾ-1 ರವರನ್ನು ಹಿಡಿದುಕೊಂಡು ಒಂದು ಎಲ್ಲೆಯಿಂದಾಚೆಗೆ ಮುಂದೆ ಹೋಗದಂತೆ ಅಕ್ರಮವಾಗಿ ಪ್ರತಿಬಂಧಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ-341 ರಡಿಯಲ್ಲಿ ದಂಡನೀಯವಾದ ಅಪರಾಧವೆಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗುತ್ತದೆ.

13. ಭಾರತೀಯ ದಂಡ ಸಂಹಿತೆ ಕಲಂ-339 ಅಕ್ರಮ ಪ್ರತಿಬಂಧ ಎಂದರೆ ಏನು ಎಂದು ವ್ಯಾಖ್ಯಾನಿಸುತ್ತದೆ. ಆರೋಪಿಗಳು ಭಾರತೀಯ ದಂಡ ಸಂಹಿತೆ ಕಲಂ-341 ರಡಿಯಲ್ಲಿ ಅಪರಾಧವೆಸಗಿರುತ್ತಾರೆಂದು ಹೇಳಬೇಕಾದರೆ ಅಭಿಯೋಜನೆಯು ಈ ಕೆಳಕಂಡ ಘಟಕಾಂಶಗಳನ್ನು ರುಜುವಾತುಪಡಿಸಬೇಕು.

(1) ಒಬ್ಬ ವ್ಯಕ್ತಿಗೆ ಒಂದು ದಿಕ್ಕಿನಲ್ಲಿ ಒಂದು ನಿರ್ಧಿಷ್ಟ ಕಾಲದಲ್ಲಿ ಹೋಗಲು ಹಕ್ಕು ಇರುತ್ತದೆ.

(2) ಹಾಗೆ ಹಕ್ಕಿನಿಂದ ಆ ವ್ಯಕ್ತಿಯು ಹೋಗುವುದಕ್ಕೆ ಸ್ವ-ಇಚ್ಛೆಯಿಂದ ಆರೋಪಿಯು ಅಡ್ಡಿಪಡಿಸುವುದು ಅಂದರೆ ಆ ರೀತಿ ಅಡ್ಡಿಪಡಿಸುವುದು ಸ್ವ-ಇಚ್ಛೆಯಿಂದ ಮಾಡಿದ್ದಾಗಿರಬೇಕು.

14. ಆರೋಪಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಸಮಾನ ಉದ್ದೇಶದಿಂದ ತಮ್ಮ ಹಲ್ಲಿನಿಂದ, ಕೈಗಳಿಂದ ಮತ್ತು ದೊಣ್ಣೆಯಿಂದ ಫ್ರಾಸಾ-1 ರವರಿಗೆ ಸ್ವ-ಇಚ್ಛೆಯಿಂದ ಹಲ್ಲೆಮಾಡಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತಾರೆಂದು ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗುತ್ತದೆ. ಭಾರತೀಯ ದಂಡ ಸಂಹಿತೆ ಕಲಂ-319 ಗಾಯ ಎಂದರೇನು ಎಂಬುದನ್ನು ವ್ಯಾಖ್ಯಾನಿಸುತ್ತದೆ. ಈ ಕಲಂ ಪ್ರಕಾರ "ಯಾವುದೇ ವ್ಯಕ್ತಿಯು ಮತ್ತಾವನೇ ವ್ಯಕ್ತಿಗೆ ದೈಹಿಕ ನೋವು ಕಾಯಿಲೆ ಅಥವಾ ದುರ್ಬಲತೆಯನ್ನು ಉಂಟು ಮಾಡಿದರೆ ಅವನು ಗಾಯವನ್ನುಂಟು ಮಾಡಿದನು ಎಂದು ಹೇಳಲಾಗುತ್ತದೆ."

15. ಭಾರತೀಯ ದಂಡ ಸಂಹಿತೆ ಕಲಂ-321 ಸ್ವ-ಇಚ್ಛೆಯಿಂದ ಗಾಯವನ್ನುಂಟು ಮಾಡುವುದರ ಬಗ್ಗೆ ತಿಳಿಸುತ್ತದೆ. ಈ ಕಲಂ ಪ್ರಕಾರ ಯಾವುದೇ ವ್ಯಕ್ತಿ ಮತ್ತಾವುದೇ ವ್ಯಕ್ತಿಗೆ ಗಾಯವನ್ನುಂಟು ಮಾಡುವ ಉದ್ದೇಶದಿಂದ ಅಥವಾ ಆ ಮೂಲಕ ಆ ವ್ಯಕ್ತಿ ಗಾಯವನ್ನುಂಟು ಮಾಡುವ ಸಂಭವವಿದೆಯೆಂದು ತಿಳಿದೂ ಯಾವುದೇ ಕೃತ್ಯವನ್ನು ಮಾಡಿದರೆ ಮತ್ತು ಅದರಿಂದಾಗಿ ಆ ವ್ಯಕ್ತಿಗೆ ಗಾಯವನ್ನುಂಟು ಮಾಡಿದರೆ ಅವನು ಸ್ವ-ಇಚ್ಛೆಯಿಂದ ಗಾಯವನ್ನುಂಟು ಮಾಡುತ್ತಾನೆ'' ಎಂದು ಹೇಳಲಾಗುತ್ತದೆ.

16. ಭಾರತೀಯ ದಂಡ ಸಂಹಿತೆ ಕಲಂ-323 ಮತ್ತು 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತಾರೆಂದು ಹೇಳಬೇಕಾದರೆ ಅಭಿಯೋಜನೆಯು ಈ ಕೆಳಕಂಡ ಅವಶ್ಯಕ ಘಟಕಾಂಶಗಳನ್ನು (Essential Ingredients) ರುಜುವಾತುಪಡಿಸಬೇಕು.

(1) ದೈಹಿಕ ನೋವನ್ನುಂಟು ಮಾಡಿರಬೇಕು.

(2) ಸ್ವ-ಇಚ್ಛೆಯಿಂದ ಗಾಯವನ್ನುಂಟು ಮಾಡುವ ಉದ್ದೇಶದಿಂದಲೇ ಮಾಡಿರಬೇಕು.

(3) ಆ ಮೂಲಕ ತಾನು ಗಾಯವನ್ನುಂಟು ಮಾಡುವ ಸಂಭವವಿದೆ ಎಂಬ ತಿಳುವಳಿಕೆಯಿಂದಲೇ ಉಂಟು ಮಾಡಿರಬೇಕು.

(4) ಸದರಿ ಗಾಯವನ್ನು ಕೈಗಳನ್ನು ಉಪಯೋಗಿಸಿ ಉಂಟು ಮಾಡಿರಬೇಕು.

17. ಭಾರತೀಯ ದಂಡ ಸಂಹಿತೆ ಕಲಂ-39 ಸ್ವ-ಇಚ್ಛೆಯಿಂದ (voluntarily) ಎಂದರೆ ಏನು ಎಂಬುದರ ಬಗ್ಗೆ ತಿಳಿಸುತ್ತದೆ. ಈ ಕಲಂ ಪ್ರಕಾರ "ಒಬ್ಬ ವ್ಯಕ್ತಿಯು ಯಾವ ಸಾಧನಗಳ ಮೂಲಕ ಉಂಟು ಮಾಡಲು ಉದ್ದೇಶಿಸಿದನೋ ಅವುಗಳ ಮೂಲಕ ಆ ಪರಿಣಾಮವನ್ನು ಉಂಟು ಮಾಡಿದರೆ ಅಥವಾ ಯಾವ ಸಾಧನಗಳನ್ನು ಬಳಸುವ ಸಮಯದಲ್ಲಿ, ಅವುಗಳಿಂದ ಆ ಪರಿಣಾಮ ಉಂಟಾಗುವುದೆಂದು ತಿಳಿದಿದ್ದೂ ಅಥವಾ ಉಂಟಾಗುವ ಸಂಭವವಿದೆಯೆಂದು ಅವನಿಗೆ ನಂಬಲು ಕಾರಣವಿದ್ದೂ, ಅದನ್ನು

ಉಂಟುಮಾಡಿದರೆ ಅವನು (ಸ್ವ-ಇಚ್ಛೆಯಿಂದ) ಒಂದು ಪರಿಣಾಮವನ್ನುಂಟು ಮಾಡಿದ್ದಾನೆ ಎಂದು ಹೇಳಲಾಗುತ್ತದೆ ."

18. ಆರೋಪಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳು ಫ್ರಾಸಾ-1 ರವರನ್ನು ಉದ್ದೇಶಿಸಿ "ನೀನು ಬಚಾವಾದೆ, ಇಲ್ಲದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇವೆ" ಎಂದು ಜೀವಬೆದರಿಕೆ ಹಾಕಿ, ಅವರು ಹೆದರುವಂತೆ ಮಾಡಿ ಕಾನೂನು ಸಮ್ಮತವಾಗಿ ಮಾಡಬೇಕಾಗಿರುವ ಕೃತ್ಯವನ್ನು ಮಾಡದಂತೆ ಅಥವಾ ಕಾನೂನು ಸಮ್ಮತವಾಗಿ ಮಾಡಬಾರದ ಕೃತ್ಯವನ್ನು ಮಾಡುವಂತೆ ಅಪಾಯದ ಭೀತಿಯನ್ನು ಹುಟ್ಟಿಸಿ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿ, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ-506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಅಭಿಯೋಜನೆಯು ಭಾರತೀಯ ದಂಡ ಸಂಹಿತೆಯ ಕಲಂ-506 ರಲ್ಲಿ ಹೇಳಿರುವ ಈ ಕೆಳಕಂಡ ಅವಶ್ಯಕ ಘಟಕಾಂಶಗಳನ್ನು (Essential Ingredients) ರುಜುವಾತುಡಿಸಬೇಕು.

(1) ಆಪಾದಿತನು ಪಿರ್ಯಾದುದಾರರಿಗೆ ಅಥವಾ ಇತರ ವ್ಯಕ್ತಿಗೆ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿದನು.

(2) ಅಂಥ ಭಯೋತ್ಪಾದನೆಯು ಆ ವ್ಯಕ್ತಿಗೆ ಕ್ಷತಿಯನ್ನುಂಟು ಮಾಡುವನೆಂಬ ಬೆದರಿಕೆಯಾಗಿತ್ತು ಮತ್ತು

(3) ಅದು ಅವನಿಗೆ ಅಪಾಯದ ಭೀತಿಯನ್ನು ಹುಟ್ಟಿಸುವಂಥದಾಗಿತ್ತು ಅಥವಾ ಅವನು ಮಾಡಬೇಕಾದ ಕೃತ್ಯವನ್ನು ಮಾಡುವಂತೆ ಮಾಡಲು ಉದ್ದೇಶಿಸಿ ಮಾಡಿದ್ದಾಗಿತ್ತು.

19. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ತಮ್ಮ ಪ್ರಕರಣವನ್ನು ರುಜುವಾತುಪಡಿಸಲು ಫಿರ್ಯಾದುದಾರರು ಹಾಗು ಗಾಯಾಳುವಾದ ಚಾಸಾ-1- ಶ್ರೀ.ಮಹದೇವುರವರನ್ನು ಫ್ರಾಸಾ-1 ಎಂದು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ

ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಅಂಗಡಿಯ ಬಾಡಿಗೆ ಕೊಡುವ ವಿಚಾರವಾಗಿ ತನ್ನ ಮತ್ತು ಆರೋಪಿಗಳ ನಡುವೆ ಬಾಯಿಮಾತಿನ ಚರ್ಚೆಯಾಗಿದ್ದು, ಇಷ್ಟಕ್ಕೆ ಹೆದರಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋದಾಗ, ಪೊಲೀಸರು ಎರಡು ದಾಖಲೆಗಳಿಗೆ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಗಳಲ್ಲಿ ಏನೆಲ್ಲಾ ಬರೆದಿದೆ ಎಂದು ತನಗೆ ಗೊತ್ತಿಲ್ಲ, ತನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಏನನ್ನೂ ವಶಪಡಿಸಿಕೊಂಡಿಲ್ಲ, ಆರೋಪಿಗಳು ತನ್ನನ್ನು ಅಕ್ರಮವಾಗಿ ತಡೆದು, ಯಾವುದೇ ರೀತಿ ಹಲ್ಲೆ ಮಾಡಿಲ್ಲ, ಯಾವುದೇ ಅವಾಚ್ಯ ಶಬ್ದಗಳಿಂದ ಬೈದು, ಜೀವಬೆದರಿಕೆ ಹಾಕಿಲ್ಲ ಮತ್ತು ಪೊಲೀಸರಿಗೆ ಯಾವುದೇ ಮರುಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯನುಡಿದಿರುತ್ತಾರೆ.

20. ಈ ಪ್ರಕರಣದಲ್ಲಿ ಫಿರ್ಯಾದುದಾರರು ಮತ್ತು ಗಾಯಾಳುವಾದ ಫ್ರಾಸಾ-1 ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸಿ ಸಾಕ್ಷ್ಯನುಡಿದಿಲ್ಲ ಮತ್ತು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಿದ್ದರೂ ಕೂಡ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾದ ಯಾವುದೇ ಅಂಶಗಳನ್ನು ಇವರಿಂದ ಹೊರತೆಗೆಯಲಾಗಿಲ್ಲ. ಆದ್ದರಿಂದ ಅಭಿಯೋಜನೆಯವರು ಉಳಿದ ಸಾಕ್ಷಿದಾರರ ಸಾಕ್ಷ್ಯ ವಿಚಾರಣೆಯನ್ನು ಮಾಡಿದರೂ ಸಹ ಇವರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಗಳ ಅಪರಾಧವನ್ನು ಸಾಬೀತುಪಡಿಸಲು ಸಾಧ್ಯವಾಗುವುದಿಲ್ಲ, ಅಲ್ಲದೇ ಪ್ರಮುಖ ಸಾಕ್ಷಿದಾರರಾದ ಫ್ರಾಸಾ-1 ರವರೆ ತನ್ನ ಸಾಕ್ಷ್ಯದಲ್ಲಿ ಆರೋಪಿಗಳೊಂದಿಗೆ ರಾಜಿಯಾಗಿರುವ ಬಗ್ಗೆ ಒಪ್ಪಿಕೊಂಡಿರುವುದರಿಂದ ಪ್ರಕರಣವನ್ನು ಮುಂದುವರಿಸುವ ಅವಶ್ಯಕತೆ ಕಂಡುಬರುವುದಿಲ್ಲ. ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ತಳ್ಳಿ ಹಾಕಿ ಬಾಕಿ ಉಳಿದ ಸಾಕ್ಷಿದಾರರ ಸಾಕ್ಷ್ಯ ವಿಚಾರಣೆಯನ್ನು ಕೈ ಬಿಡಲಾಗಿರುತ್ತದೆ.

21. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು LAWS(SC)-1996-7-136 (Satish Mehra V/S Delhi Administration and others) ಎಂದು ವರದಿಯಾಗಿರುವ ಪ್ರಕರಣದಲ್ಲಿ ಈ ಕೆಳಗಿನಂತೆ ತೀರ್ಪು ನೀಡಿರುತ್ತದೆ "In cases where there is no prospect of the case ending in conviction, the valuable time of the court should not be wasted for holding a trial only for the purpose of the formally completing the procedure to pronounce the conclusion on a future date".

22. ಪ್ರಸ್ತುತ ಪ್ರಕರಣದಲ್ಲಿ ಪ್ರಮುಖ ಸಾಕ್ಷಿದಾರರಾದ ಫ್ರಾಸಾ-1 ರವರು ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಇವರ ಸಾಕ್ಷ್ಯ ಅಭಿಯೋಜನೆಯ ಪ್ರಕರಣಕ್ಕೆ ಸಹಾಯಕವಾಗುವಂತಹ ಸಾಕ್ಷ್ಯವಾಗುವುದಿಲ್ಲ ಮತ್ತು ಇವರು ಆರೋಪಿಗಳೊಂದಿಗೆ ರಾಜಿಯಾಗಿರುವುದಾಗಿ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುವುದರಿಂದ ಆರೋಪಿಗಳ ಅಪರಾಧವನ್ನು ಸಾಬೀತುಪಡಿಸಲು ಸಾಧ್ಯವಾಗುವಂತಹ ಯಾವುದೇ ವಿರುದ್ದಾತ್ಮಕ ಹೇಳಿಕೆಗಳು ಇವರ ಸಾಕ್ಷ್ಯದಲ್ಲಿ ಕಂಡುಬರುತ್ತಿಲ್ಲ.

23. ಈ ಮೇಲೆ ಚರ್ಚಿಸಿದಂತೆ ಫ್ರಾಸಾ-1 ರವರ ಮೌಖಿಕ ಸಾಕ್ಷ್ಯವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಆರೋಪಿಗಳ ವಿರುದ್ಧ ಆರೋಪಿಸಲಾದ ಅಪರಾಧಗಳಿಗೆ ಸಂಬಂಧಿಸಿದಂತೆ ಯಾವುದೇ ಘಟಕಾಂಶಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿದೆ ಎಂದೇ ಹೇಳಬೇಕಾಗುತ್ತದೆ ಮತ್ತು ಅಭಿಯೋಜನೆಯು ಸಾದರಪಡಿಸಿರುವ ಸಾಕ್ಷ್ಯಾಧಾರಗಳಿಂದ ಆರೋಪಿಗಳ ಮೇಲಿನ ಆರೋಪಣೆಗಳನ್ನು ಸಾಬೀತುಮಾಡಲು ಸಾಧ್ಯವಿಲ್ಲ. ಆದಕಾರಣ ಆರೋಪಿಗಳಿಗೆ ಅನುಮಾನದ ಲಾಭವನ್ನು ನೀಡುತ್ತಾ, ಈ ನ್ಯಾಯಾಲಯವು ಅಂಶ 1 ರಿಂದ 4 ನ್ನು **''ನಕಾರಾತ್ಮಕವಾಗಿ''** ಉತ್ತರಿಸಿದೆ.

24. **<u>ಅಂಶ -5:-</u>** ಮೇಲ್ಕಂಡ ಅಂಶ 1 ರಿಂದ 4 ಇವುಗಳ ಚರ್ಚೆಯ

ಆಧಾರದ ಮೇಲೆ ಈ ಕೆಳಗಿನಂತೆಃ–

ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಭಾರತೀಯ ದಂಡ ಸಂಹಿತೆಯ ಕಲಂ–504, 341, 323, 324 ಮತ್ತು 506 ಸಹವಾಚಕ 34 ರಡಿಯಲ್ಲಿ ಆರೋಪಿಸಲಾದ ಆರೋಪಗಳಿಂದ ಆರೋಪಿಗಳನ್ನು ದೋಷಮುಕ್ತಗೊಳಿಸಿ ಸ್ವತಂತ್ರಗೊಳಿಸಿದೆ.

ಆರೋಪಿಗಳ ಪರ ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಗಳು 6 ತಿಂಗಳ ಕಾಲ ಮುಂದುವರಿಯುವುದು. ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೆ ಇದ್ದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂ ಚಾಲಿತವಾಗಿ ರದ್ದಾಗತಕ್ಕದ್ದು.

ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಮತ್ತು ಸ್ವತ್ತುಪಟ್ಟಿ ಸಂಖ್ಯೆಃ 56/2022 ರಲ್ಲಿ ನಮೂದಿಸಿರುವ ಮರದ ದೊಣ್ಣೆ ಮತ್ತು ಶರ್ಟ್ ಬೆಲೆ ಬಾಳದ ವಸ್ತುಗಳಾಗಿರುವುದರಿಂದ ಅವುಗಳನ್ನು ನಿಗದಿತ ಸಮಯದಲ್ಲಿ ನಾಶಪಡಿಸತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರ ಮೂಲಕ ಬೆರಳಚ್ಚು ಮಾಡಿಸಿದ್ದು, ನಂತರ ಅದನ್ನು ಓದಿ, ತಿದ್ದಿ, ಪರಿಷ್ಕರಿಸಿ, ಈ ದಿನ ಅಂದರೆ ದಿನಾಂಕಃ 02/05/2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

(ಸತೀಶ. ಕೆ.ಜಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು.

: ಅ ನು ಬಂ ಧ :

01. ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:-

ಫ್ರಾಸಾ-1/ಚಾಸಾ-1 : ಶ್ರೀ.ಮಹದೇವು

02. ಅಭಿಯೋಜನೆಯ ಪರವಾಗಿ ಹಾಜರುಪಡಿಸಿದ ದಸ್ತಾವೇಜುಗಳ ಪಟ್ಟಿ:

ನಿಪಿ-1	:	ದೂರು
ನಿಪಿ-1(ಎ)	:	ಫ್ರಾಸಾ-1 ರವರ ಸಹಿ
ನಿಪಿ-2	:	ಸ್ಥಳ ಮಹಜರ್
ನಿಪಿ-2(ಎ)	:	ಫ್ರಾಸಾ-1 ರವರ ಸಹಿ
ನಿಪಿ-3	:	ಫ್ರಾಸಾ-1 ರವರ ಅಲ್ಲಗಳೆದ ಮರು ಹೇಳಿಕೆ

03. ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟ ಮುದ್ದೆಮಾಲುಗಳ ಪಟ್ಟಿ:

- ಇಲ್ಲ -

04. ಆರೋಪಿಗಳ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:

- ಇಲ್ಲ -

05. ಆರೋಪಿಗಳ ಪರವಾಗಿ ಹಾಜರುಪಡಿಸಿದ ದಸ್ತಾವೇಜುಗಳ ಪಟ್ಟಿ:

- ಇಲ್ಲ -

(ಸತೀಶ. ಕೆ.ಜಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು.